# ರಫೆಲ್

## ಫ್ರೆಂಚ್ ದಾಖಲೆ

ರಫೆಲ್ ನಡಾಲ್ 13ನೇ ಬಾರಿಗೆ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದಿದ್ದಾರೆ. ಇದರೊಂದಿಗೆ ಆತ ಈವರೆಗೆ ಗೆದ್ದ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಸಂಖ್ಯೆ 20ಕ್ಕೇರಿದೆ. ರೋಜರ್ ಫೆಡರರ್ ಈವರೆಗೆ 20 ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದ ದಾಖಲೆಯಿತ್ತು. ಇದೀಗ ರಫೆಲ್ ಆತನ ಸರಿಸಮಕ್ಕೆ ನಿಂತಿದ್ದಾರೆ. ಜೊಕೊವಿಕ್ 17 ಗ್ರ್ಯಾನ್‌ಸ್ಲಾಮ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

ಫ್ರೆಂಚ್ ಓಪನ್ ಮಟ್ಟಿಗೆ ಮಾತ್ರವಲ್ಲ, ಜಗತ್ತಿನ ಇತರ ಮೂರು ಪ್ರತಿಷ್ಠಿತ ಗ್ರ್ಯಾನ್‌ಸ್ಲಾಮ್‌ಗಳ ಮಟ್ಟಿಗೂ ಇದೊಂದು ದಾಖಲೆಯೇ. ಜೊಕೊವಿಕ್ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿಯನ್ನು ಎಂಟು ಬಾರಿ ಗೆದ್ದಿರುವುದುಂಟು.

ಪ್ಯಾರಿಸ್‌ನ ರೊಲ್ಯಾಂಡ್ ಗೆರಾಸ್‌ನಲ್ಲಿ ಈ ಸಲ ನಡೆದ ಫ್ರೆಂಚ್ ಓಪನ್ ಮೇಲೆ ಎಲ್ಲರ ಕಣ್ಣು ನೆಟ್ಟಿದ್ದವು. ಜನವರಿಯಲ್ಲಿ ನಡೆದ ಆಸ್ಟ್ರೇಲಿಯನ್ ಓಪನ್‌ನಲ್ಲಿ ವಿಶ್ವದ 'ನಂಬರ್ ಒನ್' ಆಟಗಾರ ಜೊಕೊವಿಕ್ ಪ್ರಶಸ್ತಿ ಗೆದ್ದಿದ್ದರು. ಸೆಪ್ಟೆಂಬರ್ ಮೊದಲ ವಾರದಲ್ಲಿ ನಡೆದ ಯುಎಸ್ ಓಪನ್ ಟೂರ್ನಿಯಲ್ಲಿ ರಫೆಲ್ ಗೈರುಹಾಜರಾಗಿದ್ದರು. ಅದಕ್ಕೆ ಕಾರಣ ಕೋವಿಡ್ ಭಯ.

ಆ ಬಳಿಕ ನಡೆದದ್ದೇ ಪ್ರತಿಷ್ಠಿತ ಗ್ರ್ಯಾನ್‌ಸ್ಲಾಮ್ ಫ್ರೆಂಚ್ ಓಪನ್. ಈ ಟೂರ್ನಿಯಲ್ಲಿ ರಫೆಲ್ ಮತ್ತು ಜೊಕೊವಿಕ್ ಮುಖಾಮುಖಿಯ ನಿರೀಕ್ಷೆ ಇತ್ತು. ಅದರಂತೆ ಈ ಇಬ್ಬರೂ ಅತಿರಥರು ಫೈನಲ್‌ಗೆ ಬಂದದ್ದು ಟೆನಿಸ್ ಪ್ರೇಮಿಗಳ ಕುತೂಹಲ ಕೆರಳಿಸಿತ್ತು. ಫ್ರೆಂಚ್ ಓಪನ್ ಆರಂಭಕ್ಕೆ ಮುನ್ನವೇ ಟೆನಿಸ್ ದಿಗ್ಗಜರ ಮಧ್ಯೆ ಒಂದು ಲೆಕ್ಕಾಚಾರ ನಡೆದಿತ್ತು. ರಫೆಲ್ ಮತ್ತು ಜೊಕೊವಿಕ್ ಫೈನಲ್‌ಗೆ ಬಂದರೆ ಖಂಡಿತವಾಗಿಯೂ ಜೊಕೊವಿಕ್ ಗೆಲ್ಲುತ್ತಾರೆ ಎನ್ನುವುದು ಆ ಲೆಕ್ಕಾಚಾರ. ಅದಕ್ಕೆ ಕಾರಣ ಜೊಕೊವಿಕ್ ಫಾರ್ಮ್.

ಪ್ಯಾರಿಸ್‌ನಲ್ಲಿ ಹವಾಮಾನವೂ ರಫೆಲ್ಗೆ ಪ್ರತಿಕೂಲವಿತ್ತು. ವಸಂತ ಕಾಲದಲ್ಲಿ ನಡೆಯುತ್ತಿದ್ದ ಟೂರ್ನಿ ಕೊರೊನಾದಿಂದಾಗಿ ಮಳೆಗಾಲಕ್ಕೆ ಮುಂದೂಡಲ್ಪಟ್ಟಿತ್ತು. ಅಲ್ಲಿ ಕಡುಚಳಿಯಿತ್ತು. ಓಪನ್ ಅಂಕಣದಲ್ಲಿ 9 ಡಿಗ್ರಿ ಉಷ್ಣತೆ ಎಂದರೆ ಚೆಂಡಿನ ಸ್ಪೀಡ್ ಕಾಯ್ದುಕೊಳ್ಳುವುದು ಕಷ್ಟವೇ. ಪ್ರತಿದಿನ ಮಳೆ ಮತ್ತು ಕುಳಿರ್ಗಾಳಿಯ ಕಾಟ. ಫೈನಲ್ ಪಂದ್ಯಕ್ಕೆ ಕೋರ್ಟಿನಲ್ಲಿ ಮೇಲ್ಹಾವಣಿಯನ್ನೂ ಹಾಕಿದ್ದರು. ಸ್ಪೀಡ್‌ಗೆ ಹೆಸರುವಾಸಿಯಾದ ರಫೆಲ್ಗೆ ಚೆಂಡು ಸ್ಲೋ ಆಗುವುದರಿಂದ ತೊಂದರೆಯೇ ಹೆಚ್ಚಿತ್ತು. ಪಂದ್ಯದಲ್ಲಿ ಮೊದಲ ಬಾರಿಗೆ ಬಳಸಲಾದ ಹೊಸ ವಿಲ್ಸನ್ ಚೆಂಡು ಕೂಡಾ ಕಲ್ಲಿನಂತೆ ಗಟ್ಟಿಯಾಗಿತ್ತು. ಮಲ್ಲೋರ್ಕಾದಲ್ಲಿ ಕಳೆದ ವರ್ಷ ರಫೆಲ್ ಇದೇ ಚೆಂಡಿನಲ್ಲಿ ತರಬೇತಿ ಪಡೆದಿದ್ದರೂ, ಅದು ಸೆಕೆಗಾಲದ ತರಬೇತಿ ಆಗಿತ್ತು.

ಕೊರೊನಾದಿಂದಾಗಿ ಈ ವರ್ಷ ರಫೆಲ್ ಅನುಭವಿಸಿದ ತೊಂದರೆಗಳೂ ಒಂದೆರಡಲ್ಲ. ಫೆಬ್ರುವರಿ ಕೊನೆಯಲ್ಲಿ ಅಕಾಪುಲ್ಕೊ ಪ್ರಶಸ್ತಿ ಗೆದ್ದದ್ದೇ ಕೊನೆ. ಆ ಬಳಿಕ ಸೆಪ್ಟೆಂಬರ್‌ವರೆಗೆ ಯಾವ ಟೂರ್ನಿಯೂ ನಡೆಯಲಿಲ್ಲ. ಸಿಂಸಿನ್ನಟಿ ಮತ್ತು ಯುಎಸ್ ಓಪನ್ ಎರಡನ್ನೂ ತಪ್ಪಿಸಿಕೊಂಡ ರಫೆಲ್, ಸೆಪ್ಟೆಂಬರ್ ಕೊನೆಯಲ್ಲಿ ರೋಮ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಡಿಯಾಗೊ ಸ್ವಾಸ್‌ರ್ಮನ್ ವಿರುದ್ಧ ಹೀನಾಯ ಸೋಲನುಭವಿಸಿದ್ದರು.

ರಫೆಲ್ ಅವರ ಅಚ್ಚುಮೆಚ್ಚಿನ ಇಂಡಿಯನ್ ವೆಲ್ಸ್, ಮಾಂಟೆ ಕಾರ್ಲೊ, ಬಾರ್ಸಿಲೊನಾ ಅಥವಾ ಮ್ಯಾಡ್ರಿಡ್‌ಗಳಲ್ಲಿಯೂ ಆತ ಈ ವರ್ಷ ಯಾವುದೇ ಪಂದ್ಯಗಳನ್ನು ಆಡಲಾಗಲಿಲ್ಲ. ಸಾಮಾನ್ಯವಾಗಿ ಪ್ರತಿವರ್ಷ ಈ ಎಲ್ಲ ಟೂರ್ನಿಗಳಲ್ಲೂ ಆಡಿ ಫಾರ್ಮ್ ಹೆಚ್ಚಿಸಿಕೊಂಡು ಆತ ಪ್ಯಾರಿಸ್‌ಗೆ ಬರುವುದು ವಾಡಿಕೆ. ಈ ಸಲ ಕೊರೊನಾ ಭಯದಿಂದಾಗಿ ತನ್ನ ಮಲ್ಲೋರ್ಕ ದ್ವೀಪದಲ್ಲಿ ಆತ ಕುಟುಂಬದ ಸದಸ್ಯರ ಜೊತೆಗೆ ತಣ್ಣಗೆ ಕುಳಿತುಕೊಂಡಿದ್ದ. ಅದರಲ್ಲೂ ಎರಡು ತಿಂಗಳ ಕಾಲ ಟೆನಿಸ್ ಅಂಕಣಕ್ಕೆ ಅಭ್ಯಾಸ ಮಾಡಲೂ ಇಳಿಯಲಿಲ್ಲ.

ಆದರೆ ರಫೆಲ್ ಮಾಡಿದ ಮ್ಯಾಜಿಕ್ ಅನ್ನು ಟೆನಿಸ್ ಪ್ರೇಮಿಗಳಿಗೆ ನಂಬಲೂ ಕಷ್ಟವಾಯಿತು. ನೇರ ಮೂರು ಸೆಟ್‌ಗಳ ಗೆಲುವು! 6–0, 6–2 ಮತ್ತು 7–5 ಅಂಕಗಳ ಗೆಲುವು. ವಿಶ್ವದ 'ನಂಬರ್ ಒನ್' ರ‍್ಯಾಂಕಿಂಗ್ ಹೊಂದಿರುವ ಆಟಗಾರ ಜೆಕೊವಿಕ್ ಉಸಿರೆತ್ತಲೂ ಆಗದಂತೆ ಆಟವಾಡಿದ ರಫೆಲ್, ಇಡೀ ಪಂದ್ಯವನ್ನು ಏಕಪಕ್ಷೀಯ ಮಾಡಿಬಿಟ್ಟರು. ಪಂದ್ಯದ ಕೊನೆಯಲ್ಲಿ 'ಆತ ಅದ್ಭುತವಾಗಿ ಆಡಿದ. ನಾನು ಹೇಳುವುದು ಇನ್ನೇನೂ ಉಳಿದಿಲ್ಲ' ಎಂದು ಸ್ವತಃ ಜೆಕೊವಿಕ್ ಪ್ರತಿಕ್ರಿಯೆ ನೀಡಿದ್ದರು. ಇನ್ನೊಂದು ವಿಶೇಷವೆಂದರೆ ಈ ಸಲದ ಫ್ರೆಂಚ್ ಓಪನ್‌ನಲ್ಲಿ ಆಡಿದ ಅಷ್ಟೂ ಪಂದ್ಯಗಳಲ್ಲಿ ರಫೆಲ್, ಎದುರಾಳಿಗೆ ಒಂದು ಸೆಟ್ ಅನ್ನೂ ಬಿಟ್ಟುಕೊಡಲಿಲ್ಲ! ಆವೆಮಣ್ಣಿನ ಅಂಕಣದಲ್ಲಿ ರಫೆಲ್ ನಿಸ್ಸಂಶಯವಾಗಿಯೂ ಅನಭಿಷಿಕ್ತ ದೊರೆ ಎನ್ನುವುದು ಮತ್ತೆ ಸಾಬೀತಾಯಿತು.



ಕಳೆದ 16 ವರ್ಷಗಳಲ್ಲಿ ಎರಡು ವರ್ಷಗಳನ್ನು ಹೊರತುಪಡಿಸಿದರೆ ಪ್ರತಿವರ್ಷವೂ ರಫೆಲ್ ಒಂದಲ್ಲ ಒಂದು ಪ್ರತಿಷ್ಠಿತ ಟೂರ್ನಿಯಲ್ಲಿ ಟ್ರೋಫಿ ಗೆದ್ದಿದ್ದಾರೆ. ಕೊರೊನಾ ಸಾಂಕ್ರಾಮಿಕದಿಂದಾಗಿ ಮಾನಸಿಕ ಒತ್ತಡ, ಫಾರ್ಮ್ ಉಳಿಸಿಕೊಳ್ಳುವ ಕಷ್ಟ, ತರಬೇತಿಯ ಕೊರತೆ ಎಲ್ಲವನ್ನೂ ಎದುರಿಸಿ ರಫೆಲ್ ಪ್ರಶಸ್ತಿ ಗೆದ್ದಿರುವುದು ವಿಶೇಷವೇ. ಈ ವರ್ಷ ಇನ್ಯಾವುದೇ ಟೂರ್ನಿಯಲ್ಲೂ ಆಡುವುದಿಲ್ಲ ಎಂದು ರಫೆಲ್ ಈಗಾಗಲೆ ಸೂಚನೆ ನೀಡಿದ್ದಾರೆ. ರೊಲ್ಯಾಂಡ್ ಗೆರೋಸ್‌ನಲ್ಲಿ ಇದು ರಫೆಲ್ ಸಾಧಿಸಿದ ನೂರನೇ ಗೆಲುವೂ ಒಂದು ದಾಖಲೆಯೇ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65